ಕರ್ನಾಟಕ ಸರಕಾರ

ಸಂ:ಅಬಕ/ಆಡಳಿತ/ಸಿಬ್ಬಂದಿ/ಅ.ಉ.ನಿ/ದೈ.ಪ/ 8928/2019-20

ಅಬಕಾರಿ ಉಪ ಆಯುಕ್ತರ ಕಛೇರಿ,
ಕಲಬುರಗಿ ಜಿಲ್ಲೆ, ಕಲಬುರಗಿ
ದಿನಾಂಕ:28-02-2020

# ಪತ್ರಿಕಾ ಪ್ರಕಟಣೆ

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಅಬಕಾರಿ ಇಲಾಖೆಯಲ್ಲಿ ಅಬಕಾರಿ ಉಪ ನಿರೀಕ್ಷಕರ (ಪುರಷ ಮತ್ತು ಮಹಿಳೆ) ಹುದ್ದೆಗಳ ನೇಮಕಾತಿ ಕುರಿತು ಅಬಕಾರಿ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 1996 ಮತ್ತು 2009 ರನ್ವಯ ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು 1:5 ಅನುಪಾತದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಜೇಷ್ಠತೆಯ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಆಯ್ಕೆ ಮಾಡಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದೈಹಿಕ ಸಾಮಾರ್ಥ್ಯ ಪರೀಕ್ಷೆಯನ್ನು ನಡೆಸಲು ಸೂಚಿಸಿರುತ್ತಾರೆ.

ಸದರಿ ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಸಲು ಕಲಬುರಗಿ ಜಿಲ್ಲೆಗೆ ಅರ್ಹತೆಯಾದ ಅಭ್ಯರ್ಥಿಗಳನ್ನು ಶ್ರೀ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣ ಕಲಬುರಗಿದಲ್ಲಿ ದೈಹಿಕ ಪರೀಕ್ಷೆ ನಡೆಸಲು ದಿ: 05-03-2020 ರಂದು ಬೆಳಗ್ಗೆ 7.30 ರಿಂದ ಸಾಯಂಕಾಲ 5.00 ಗಂಟೆ ವರೆಗೆ ದಿನಾಂಕವನ್ನು ನಿಗಧಿಪಡಿಸಲಾಗಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ http://gulbarga.nic.in website ನೋಡಬಹುದಾಗಿದೆ. ಅಭ್ಯರ್ಥಿಗಳು ಸೂಚನಾ ಪತ್ರ ದೊರೆಯದೆ ಇದ್ದಲ್ಲಿ ತಮ್ಮ ಅರ್ಜಿ ಹಾಗೂ ಭಾವಚಿತ್ರ ಇರುವ ಗುರುತಿನ ಚೀಟಿಯೊಂದಿಗೆ ನಿಗದಿತ ದಿನಾಂಕಗಳಂದು ಶ್ರೀ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣ ಕಲಬುರಗಿಯಲ್ಲಿ ಹಾಜರಾಗಲು ಸೂಚಿಸಿದೆ.

ಸದರಿ ಮಾಹಿತಿಯನ್ನು ತಮ್ಮ ತಂತ್ರಜ್ಞಾನದಲ್ಲಿ ಅಭ್ಯರ್ಥಿಗಳಿಗಾಗಿ ಪ್ರಚಾರ ಪಡಿಸಲು ಕೋರಲಾಗಿದೆ.

28/2

**ಕಾರ್ಯದರ್ಶಿಗಳು ಹಾಗೂ**
**ಅಬಕಾರಿ ಉಪ ಆಯುಕ್ತರು,**
**ಅಬಕಾರಿ ಉಪ ನಿರೀಕ್ಷಕರ ದೇಹದಾರ್ಢ್ಯತೆ ಮತ್ತು**
**ದೈಹಿಕ ಅರ್ಹತಾ ಪರೀಕ್ಷೆ ಸಮಿತಿ ಕಲಬುರಗಿ ಜಿಲ್ಲೆ,**